ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**27.07.2025 / 1.10pm**
**<><*<><>*><>**
<u>ಮುಖ್ಯಾಂಶಗಳು</u>

ಮುಖ್ಯಾಂಶಗಳು

೧.	೨೧ನೇ ಶತಮಾನದ ಭಾರತದಲ್ಲಿ, ವಿಜ್ಞಾನ ಹೊಸ ಶಕ್ತಿಯೊಂದಿಗೆ ಮುನ್ನಡೆದಿದೆ -ಪ್ರಧಾನಿ ನರೇಂದ್ರ ಮೋದಿ

೨.	ಪಾರಂಪರಿಕ ಜ್ಞಾನವೇ ಭಾರತದ ನಿಜವಾದ ಶಕ್ತಿ - ಮನದ ಮಾತಿನಲ್ಲಿ ಪ್ರಧಾನಿ ಅಭಿಮತ

೩.	ಮಾಜಿ ರಾಷ್ಟ್ರಪತಿ, ಖ್ಯಾತ ವಿಜ್ಞಾನಿ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಪುಣ್ಯಸ್ಮರಣೆ ಇಂದು; ಗಣ್ಯರಿಂದ ಗೌರವ ನಮನ

೪.	ಹರಿದ್ವಾರದ ಮಾನ್ಸಾ ದೇವಿ ದೇಗುಲದಲ್ಲಿ ಕಾಲ್ತುಳಿತ; ೬ ಮಂದಿ ಸಾವು, ಹಲವರಿಗೆ ಗಾಯ

೫.	ಆಂಡರ್ಸನ್-ತೆಂಡೂಲ್ಕರ್ ಟ್ರೋಫಿ; ನಾಲ್ಕನೇ ಟೆಸ್ಟ್‌ನ ಕೊನೆಯ ದಿನದಾಟದಲ್ಲಿಂದು ಎರಡನೇ ಇನ್ನಿಂಗ್ಸ್ ಮುಂದುವರಿಸಲಿರುವ ಭಾರತ

><><><><><><><><><><><

೨೧ನೇ ಶತಮಾನದ ಭಾರತದಲ್ಲಿ, ವಿಜ್ಞಾನ ಹೊಸ ಶಕ್ತಿಯೊಂದಿಗೆ ಮುನ್ನಡೆದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ೧೨೪ನೇ ಆವೃತ್ತಿಯ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿಂದು ಸಮಸ್ತ ಭಾರತೀಯರನ್ನುದ್ದೇಶಿಸಿ ಮಾತನಾಡಿ ಪ್ರಧಾನಿ, ವಿಜ್ಞಾನ, ಕ್ರೀಡೆ, ಭಾರತೀಯ ಪರಂಪರೆ, ಸ್ವಾತಂತ್ರ್ಯ ಹೋರಾಟ, ಪಕ್ಷಿಗಣತಿ ಸೇರಿದಂತೆ ವಿವಿಧ ವಿಷಯಗಳನ್ನು ಪ್ರಸ್ತಾಪಿಸಿ, ಭಾರತ ತೀವ್ರಗತಿಯಲ್ಲಿ ಪ್ರಗತಿ ಹೊಂದುತ್ತಿರುವುದಾಗಿ ತಿಳಿಸಿದರು. ಮೊದಲಿಗೆ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರ ಯಶಸ್ವಿ ಬಾಹ್ಯಾಕಾಶಯಾನವನ್ನು ದೇಶ ಸಂಭ್ರಮಿಸಿದ ಪರಿ ಮತ್ತು ಅದರಿಂದ ಮಕ್ಕಳು, ಯುವಕರಲ್ಲಿ ಬಾಹ್ಯಾಕಾಶ ಕುರಿತು ಯಾವ ಮಟ್ಟಿಗೆ ಕುತೂಹಲ ಮೂಡಿದೆ ಎಂಬುದರ ಕುರಿತು ತಿಳಿಸಿದರು.  ಇದೇ ವೇಳೆ, 'ಇನ್ಸ್ಪೈರ್ ಮಾನಕ್' ಅಭಿಯಾನವನ್ನು ಉಲ್ಲೇಖಿಸಿದ ಅವರು, ಈ ಅಭಿಯಾನದಡಿ ಪ್ರತಿ ಶಾಲೆಯಿಂದ ಐದು ಮಕ್ಕಳನ್ನು ಆಯ್ಕೆ ಮಾಡಿ,

ಹೊಸ ಆವಿಷ್ಕಾರಗಳನ್ನು ಮಂಡಿಸುವಂತೆ ಉತ್ತೇಜಿಸಿ, ದೇಶದಲ್ಲಿ ನಾವೀನ್ಯತೆಗೆ ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ಹೇಳಿದರು. ಬಾಹ್ಯಾಕಾಶ ನವೋದ್ಯಮಗಳು ವೇಗವಾಗಿ ಬೆಳೆಯುತ್ತಿವೆ. ಐದು ವರ್ಷಗಳ ಹಿಂದೆ ೫೦ಕ್ಕಿಂತ ಕಡಿಮೆಯಿದ್ದ ನವೋದ್ಯಮಗಳ ಸಂಖ್ಯೆ, ಈಗ ೨೦೦ ದಾಟಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಬಳಿಕ ಪ್ರಧಾನಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿರುವ ರಸಾಯನ ಶಾಸ್ತ್ರ ಒಲಿಂಪಿಯಾಡ್, ಗಣಿತ ಒಲಿಂಪಿಯಾಡ್‌ನಲ್ಲಿ ಭಾರತೀಯ ವಿದ್ಯಾರ್ಥಿಗಳು ತೋರಿದ ಅದ್ಭುತ ಪ್ರದರ್ಶನದ ಕುರಿತು ಶ್ಲಾಘನೆ ವ್ಯಕ್ತಪಡಿಸಿದರು. ಇದೇ ವೇಳೆ, ಮುಂದಿನ ವರ್ಷ ಮುಂಬೈನಲ್ಲಿ ನಡೆಯಲಿರುವ ಖಗೋಳ ಶಾಸ್ತ್ರ ಮತ್ತು ಖಭೌತಶಾಸ್ತ್ರ ಒಲಿಂಪಿಯಾಡ್ ಕುರಿತು ಮಾಹಿತಿ ನೀಡಿ, ಇದು ಇಲ್ಲಿಯವರೆಗೆ ನಡೆದ ಅತಿ ದೊಡ್ಡ ಒಲಿಂಪಿಯಾಡ್ ಆಗಿರಲಿದ್ದು, ಭಾರತ, ಒಲಿಂಪಿಕ್ಸ್ ಮತ್ತು ಒಲಿಂಪಿಯಾಡ್ ಎರಡರಲ್ಲೂ ಸಾಧನೆ ಮೆರೆಯುತ್ತಿದೆ ಎಂದರು.

**ಧ್ವನಿ: ಪ್ರಧಾನಿ ನರೇಂದ್ರ ( ೩೭ ಸೆಕೆಂಡ್ಸ್) ಸೈನ್ಸ್ ಮೆಡಲ್**

ಯುನೆಸ್ಕೊ ಸಂಸ್ಥೆ, ಮಹಾರಾಷ್ಟ್ರದಲ್ಲಿರುವ ೧೧ ಮತ್ತು ತೆಲಂಗಾಣದಲ್ಲಿರುವ ೧ ಕೋಟೆ ಸೇರಿದಂತೆ ಒಟ್ಟು ೧೨ ಮರಾಠಾ ಕೋಟೆಗಳನ್ನು ವಿಶ್ವಪಾರಂಪರಿಕ ತಾಣಗಳಾಗಿ ಗುರುತಿಸಿರುವ ಬಗ್ಗೆ ಸಂತಸ ವ್ಯಕ್ತಪಡಿಸಿರುವ ಪ್ರಧಾನಿ, ದೇಶದಲ್ಲಿರುವ ವಿವಿಧ ಕೋಟೆಗಳ ವೈಶಿಷ್ಟ್ಯತೆಯ ಕುರಿತು ವಿವರಿಸಿದರು. ಕೋಟೆಗಳಿಗಾಗಿಯೇ ಖ್ಯಾತಿ ಪಡೆದಿರುವ ರಾಜಸ್ಥಾನದ ವಿಶ್ವಪ್ರಸಿದ್ಧ ಜೈಸಲ್ಮೇರ್, ಛಿತ್ತೋರಗಢ, ರಣಥಂಬೋರ್ ಸೇರಿದಂತೆ ಹಲವು ಕೋಟೆಗಳು ಹವಾಮಾನ ವೈಪರಿತ್ಯ ನಡುವೆಯೂ ತಲೆ ಎತ್ತಿ ನಿಂತಿವೆ. ಇದೇ ವೇಳೆ, ಕರ್ನಾಟಕದ ಕೋಟೆಗಳನ್ನೂ ಪ್ರಸ್ತಾಪಿಸಿರುವ ಪ್ರಧಾನಿ, ಗುಲ್ಬರ್ಗಾ ಕೋಟೆ, ಚಿತ್ರದುರ್ಗ ಕೋಟೆ ವಿಶಾಲತೆ ಕುರಿತು ಅಚ್ಚರಿ ವ್ಯಕ್ತಪಡಿಸಿದರು. ಈ ಎಲ್ಲಾ ಕೋಟೆಗಳಲ್ಲಿ ದೇಶದ ಸಂಸ್ಕೃತಿ ಮತ್ತು ಸ್ವಾಭಿಮಾನದ ಮೆರುಗನ್ನು ಕಾಣಬಹುದಾಗಿದೆ ಎಂದ ಅವರು, ಅವುಗಳಿಗೆ ಭೇಟಿ ನೀಡಿ, ಇತಿಹಾಸವನ್ನು ಅರಿತು ಹೆಮ್ಮೆಪಡುವಂತೆ ದೇಶವಾಸಿಗಳಿಗೆ ಕರೆ ನೀಡಿದರು.

**ಧ್ವನಿ:ಪ್ರಧಾನಿ ನರೇಂದ್ರ ಮೋದಿ ( ४೦ ಸೆಕೆಂಡ್ಸ್) ಕರ್ನಾಟಕ ಕೋಟೆ**

ಆಗಸ್ಟ್ ತಿಂಗಳನ್ನು ಕ್ರಾಂತಿಯ ತಿಂಗಳು ಎಂದು ಬಣ್ಣಿಸಿದ ಪ್ರಧಾನಿ, ಈ ತಿಂಗಳಲ್ಲಿ ಭಾರತದ ಇತಿಹಾಸ ಕಂಡಿರುವ ಹಲವು ಪ್ರಮುಖ ಘಟ್ಟಗಳ ಕುರಿತು ಮತ್ತು ಪ್ರಮುಖ ದಿನಗಳ ಮಾಹಿತಿ ಹಂಚಿಕೊಂಡರು. ಆಗಸ್ಟ್ ೧ ರಂದು ಆಚರಿಸಲಾಗುವ ಲೋಕಮಾನ್ಯ ಬಾಲಗಂಗಾಧರ ತಿಲಕ್ ಅವರ ಪುಣ್ಯ ಜಯಂತಿ, ೮ ರಂದು ಮಹಾತ್ಮಾಗಾಂಧೀಜಿ ನೇತೃತ್ವದ ಕ್ವಿಟ್ ಇಂಡಿಯಾ ಚಳುವಳಿ ಆರಂಭ, ಆಗಸ್ಟ್ ೧೫ರ ಸ್ವಾತಂತ್ರ್ಯೋತ್ಸವದ ದಿನದ ಬಗ್ಗೆ ಪ್ರಸ್ತಾಪಿಸಿದರು. ೧೯೦೫ ಆಗಸ್ಟ್ ೭

ರಂದು ಆರಂಭವಾದ ಸ್ವದೇಶಿ ಚಳುವಳಿಯ ಸ್ಮರಣಾರ್ಥ ಇಂದು ದೇಶದಲ್ಲಿ ಪ್ರತಿವರ್ಷ ಈ ದಿನವನ್ನು ರಾಷ್ಟ್ರೀಯ ಕೈಮಗ್ಗ ದಿನವನ್ನಾಗಿ ಆಚರಿಸಲಾಗುತ್ತಿದ್ದು, ಈ ಆಚರಣೆ ಪ್ರಸಕ್ತ ವರ್ಷ ಹತ್ತು ವರ್ಷಗಳನ್ನು ಪೂರೈಸುತ್ತಿದೆ. ಅಂದು ಖಾದಿ ಸ್ವಾತಂತ್ರ್ಯ ಚಳುವಳಿಗೆ ನೀಡಿದ ಶಕ್ತಿಯಂತೆ, ಇಂದು ಜವಳಿ ವಲಯ ದೇಶದ ಶಕ್ತಿಯಾಗಿ ಹೊರಹೊಮ್ಮುತ್ತಿದೆ ಎಂದು ತಿಳಿಸಿದರು. ಇದೇ ವೇಳೆ, ವಲಯದಲ್ಲಿ ಯಶಸ್ಸು ಕಂಡಿರುವ, ಸ್ಥಳೀಯ ಸಂಥಾಲಿ ಸೀರೆಗಳಿಗೆ ಪುನರುಜ್ಜೀವನ ನೀಡುತ್ತಿರುವ ಮಹಾರಾಷ್ಟ್ರದ ಕವಿತಾ ದಾವಳೆ, ಕೈಮಗ್ಗಕ್ಕೆ ಆಧುನೀಕತೆ ಅಳವಡಿಸಿರುವ ಬಿಹಾರದ ನವೀನ್ ಕುಮಾರ್ ಅವರನ್ನು ಪ್ರಧಾನಿ ಉಲ್ಲೇಖಿಸಿದರು. ಸ್ವಾವಲಂಬಿ ಭಾರತದ ನಿರ್ಮಾಣಕ್ಕೆ 'ವೋಕಲ್ ಫಾರ್ ಲೋಕಲ್' ಉಪಕ್ರಮ ಆಧಾರವೆಂದ ಪ್ರಧಾನಿ ನರೇಂದ್ರ ಮೋದಿ, ಸ್ಥಳೀಯವಾಗಿ ತಯಾರಿಸಲಾಗುವ ಉತ್ಪನ್ನಗಳನ್ನು ಖರೀದಿಸುವ ಸಂಕಲ್ಪ ಕೈಗೊಳ್ಳುವಂತೆ ಕರೆ ನೀಡಿದರು. ಹಸ್ತಪ್ರತಿಗಳ ರೂಪದಲ್ಲಿ ರಕ್ಷಿಸಲಾಗಿರುವ ಪಾರಂಪರಿನ ಜ್ಞಾನವೇ ನಮ್ಮ ನಿಜವಾದ ಶಕ್ತಿ ಎಂದು ಪ್ರಧಾನಿ ಹೇಳಿದರು. ಈ ಹಸ್ತಪ್ರತಿಗಳಲ್ಲಿ ವಿಜ್ಞಾನ, ಚಿಕಿತ್ಸಾ ಪದ್ಧತಿಗಳು, ಸಂಗೀತ, ತತ್ವಶಾಸ್ತ್ರ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ, ಮನುಕುಲದ ಏಳ್ಗೆ ಬಯಸುವ ಚಿಂತನೆಗಳು ಅಡಗಿವೆ. ಕೇಂದ್ರ ಸರ್ಕಾರ, 'ಜ್ಞಾನ ಭಾರತಂ ಮಿಷನ್' ಅಡಿಯಲ್ಲಿ ಪ್ರಾಚೀನ ಹಸ್ತಪ್ರತಿಗಳ ಡಿಜಿಟಲೀಕರಣಕ್ಕೆ ಮುಂದಾಗಿದೆ ಎಂದು ತಿಳಿಸಿದರು. ಮಾವೋವಾದ ಮತ್ತು ನಕ್ಸಲ್ ವಾದದ ವಿಷಯದಲ್ಲಿ ಭಾರತ ಸಾಧಿಸಿರುವ ಪ್ರಗತಿಯನ್ನು ಉಲ್ಲೇಖಿಸಿ, ಈ ಹಿಂದೆ ಮಾವೋವಾದ ಹಿಂಸಾಚಾರಕ್ಕೆ ಹೆಸರಾಗಿದ್ದ ಜಾರ್ಖಂಡ್‌ನ ಗುಮಲಾ ಜಿಲ್ಲೆ ಮತ್ಸ್ಯ ಕ್ರಾಂತಿಗೆ ಸಾಕ್ಷಿಯಾಗಿ ಶಾಂತಿಯನ್ನು ಮರುಪಡೆದ ಬಗ್ಗೆ ಹಾಗೂ ಇದಕ್ಕೆ ಕಾರಣರಾದ ಸ್ಥಳೀಯ ಯುವಕ ಓಂ ಪ್ರಕಾಶ ಸಾಹೂ ಕುರಿತು ಹರ್ಷ ವ್ಯಕ್ತಪಡಿಸಿದರು. ಭಾರತ ಕ್ರೀಡಾ ಶಕ್ತಿ ಕೇಂದ್ರವಾಗುವತ್ತ ತಾಪುಗಾಲಿಡುತ್ತಿದೆ ಎಂದ ಪ್ರಧಾನಿ, ಇತ್ತೀಚೆಗೆ ಅಮೆರಿಕಾದಲ್ಲಿ ವರ್ಲ್ಡ್ ಪೊಲೀಸ್ ಅಂಡ್ ಫೈಯರ್ ಗೇಮ್ಸ್‌ನಲ್ಲಿ ಭಾಗವಹಿಸಿದ ಭಾರತೀಯ ಪೊಲೀಸ್ ಅಗ್ನಿಶಾಮಕ ಮತ್ತು ಭದ್ರತಾ ಕ್ಷೇತ್ರಕ್ಕೆ ಸಂಬಂಧಿಸಿದ ಸಿಬ್ಬಂದಿಯ ತಂಡ ೬೦೦ ಪದಕಗಳನ್ನು ಗೆದ್ದು, ೭೧ ದೇಶಗಳ ಪೈಕಿ ಮೂರನೇ ಸ್ಥಾನ ಗಳಿಸಿದ್ದಕ್ಕೆ ಪ್ರಶಂಸೆ ವ್ಯಕ್ತಪಡಿಸಿದರು. ಬಳಿಕ ಖೇಲೋ ಭಾರತ್ ನೀತಿ-೨೦೨೫ಗೆ ವ್ಯಕ್ತವಾಗಿರುವ ಮೆಚ್ಚುಗೆ ಕುರಿತು ಪ್ರಸ್ತಾಪಿಸಿದರು. ಶ್ರಾವಣಮಾಸ ಆರಂಭವಾಗಿರುವ ಹಿನ್ನೆಲೆ ದೇಶ ಪುನಃ ಹಬ್ಬಗಳ ಬಣ್ಣಗಳಿಂದ ಅಲಂಕೃತಗೊಂಡಿದೆ. ನಾಗಪಂಚಮಿ, ರಕ್ಷಾಬಂಧನ, ಕೃಷ್ಣ ಜನ್ಮಾಷ್ಟಮಿ ಸೇರಿದಂತೆ ವಿವಿಧ ಹಬ್ಬಗಳು ಪ್ರಕೃತಿಯೊಂದಿಗೆ ಜನರ ನಂಟು ಮತ್ತು ಸಮತೋಲನದ ಸಂದೇಶ ನೀಡುತ್ತವೆ ಎಂದ ಪ್ರಧಾನಿ ನರೇಂದ್ರ ಮೋದಿ, ದೇಶವಾಸಿಗಳಿಗೆ ಹಬ್ಬಗಳ ಅಂಗವಾಗಿ ಶುಭ ಹಾರೈಸಿದರು.

><><><><><><><><><><><><><><><><><

ಮಾಜಿ ರಾಷ್ಟ್ರಪತಿ ಮತ್ತು ಖ್ಯಾತ ವಿಜ್ಞಾನಿ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಅವರ ಪುಣ್ಯಸ್ಮರಣೆ ದಿನವಾದ ಇಂದು ದೇಶವು ಅವರಿಗೆ ಗೌರವ ಸಲ್ಲಿಸುತ್ತಿದೆ. ಭಾರತದ ಬಾಹ್ಯಾಕಾಶ ಮತ್ತು ಕ್ಷಿಪಣಿ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದ ಡಾ.ಅಬ್ದುಲ್ ಕಲಾಂ ಅವರನ್ನು 'ಭಾರತದ ಕ್ಷಿಪಣಿ ಮನುಷ್ಯ' ಎಂದೂ ಕರೆಯಲಾಗುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರು ಮಾಜಿ ರಾಷ್ಟ್ರಪತಿಗಳ ಪುಣ್ಯತಿಥಿಯಂದು ಅವರಿಗೆ ಗೌರವ ಸಲ್ಲಿಸಿದ್ದಾರೆ.

><><><><><><><><><

ಉತ್ತರಾಖಂಡ್‌ನ ಹರಿದ್ವಾರದ ಮಾನ್ಸಾ ದೇವಿ ದೇವಸ್ಥಾನದಲ್ಲಿ ಇಂದು ಸಂಭವಿಸಿದ ಕಾಲ್ತುಳಿತ ದುರಂತದಲ್ಲಿ ೬ ಮಂದಿ  ಸಾವನ್ನಪ್ಪಿದ್ದು, ಅನೇಕರು ಗಾಯಗೊಂಡಿದ್ದಾರೆ. ಹೈ ವೋಲ್ಟೇಜ್ ವಿದ್ಯುತ್ ತಂತಿಯು ಕಿಕ್ಕಿರಿದು ನೆರೆದಿದ್ದ ಜನಸಮೂಹದ ಮೇಲೆ ಬಿದ್ದ ಸಂದರ್ಭದಲ್ಲಿ ಜನರ ನೂಕು ನುಗ್ಗಲಿನ ವೇಳೆ ಈ ದುರ್ಘಟನೆ ನಡೆದಿದೆ.  ಈ ದುರ್ಘಟನೆಗೆ ತೀವ್ರ ಸಂತಾಪ ಸೂಚಿಸಿರುವ ಉತ್ತರಾಖಂಡ್ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ಸ್ಥಳೀಯ ಆಡಳಿತದೊಂದಿಗೆ ತಾನು ನಿಕಟ ಸಂಪರ್ಕದಲ್ಲಿದ್ದು, ಘಟನೆಯ ಸಂಬಂಧ ತೀವ್ರ ನಿಗಾ ವಹಿಸಲಾಗುವುದು ಎಂದಿದ್ದಾರೆ. ಈ ದುರ್ಘಟನೆಯಲ್ಲಿ ಮೃತಪಟ್ಟವರಿಗೆ ಪ್ರಧಾನಿ ನರೇಂದ್ರ ಮೋದಿಯವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಘಟನೆಯಲ್ಲಿ ಗಾಯಗೊಂಡವರು ಶೀಘ್ರ ಗುಣಮುಖರಾಗಲಿ ಎಂದು ಸಾಮಾಜಿಕ ಮಾಧ್ಯಮದಲ್ಲಿ ಪ್ರಾರ್ಥಿಸಿದ್ದಾರೆ,

><><><><><><><><><

ಅರೆಸೇನಾ ಪಡೆಗಳ ಸ್ಥಾಪನಾ ದಿನವಾದು ಇಂದು ಕೇಂದ್ರೀಯ ಮೀಸಲು ಪೊಲೀಸ್ ಪಡೆ-ಸಿಆರ್‌ಪಿಎಫ್ ಸಿಬ್ಬಂದಿ ಮತ್ತು ಅವರ ಕುಟುಂಬಗಳಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಶುಭಾಶಯ ಕೋರಿದ್ದಾರೆ.

><><><><><><><><><

ಮ್ಯಾಂಚೆಸ್ಟರ್‌ನ ಓಲ್ಡ್ ಟ್ರಾಫರ್ಡ್‌ನಲ್ಲಿ ಭಾರತ- ಇಂಗ್ಲೆಂಡ್ ನಡುವೆ ನಡೆಯುತ್ತಿರುವ ಆಂಡರ್ಸನ್-ತೆಂಡೂಲ್ಕರ್ ಟ್ರೋಫಿಯ, ನಾಲ್ಕನೇ ಟೆಸ್ಟ್ ಕ್ರಿಕೆಟ್‌ನ, ಕೊನೆಯ ದಿನವಾದ ಇಂದು ೨ ವಿಕೆಟ್ ನಷ್ಟಕ್ಕೆ ೧೭೪  ರನ್‌ಗಳಿಸಿರುವ ಭಾರತ, ತನ್ನ ಎರಡನೇ ಇನ್ನಿಂಗ್ಸ್ ಅನ್ನು ಮುಂದುವರಿಸಲಿದೆ. ಇಂದಿನ ದಿನದಾಟ ಮಧ್ಯಾಹ್ನ ೩.೩೦ಕ್ಕೆ ಆರಂಭವಾಗಲಿದೆ. ನಿನ್ನೆ ೪ನೇ ದಿನದಾಟದ ಅಂತ್ಯಕ್ಕೆ ಭಾರತ ೧೩೭ ರನ್‌ಗಳ ಹಿನ್ನಡೆಯಲಿತ್ತು. ಇದಕ್ಕೂ ಮುನ್ನ ಇಂಗ್ಲೆಂಡ್ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶನದೊಂದಿಗೆ ತನ್ನ ಎರಡನೇ ಇನ್ನಿಂಗ್ಸ್‌ನಲ್ಲಿ ಭಾರತಕ್ಕಿಂತ ೩೧೧

ರನ್‌ಗಳ ಬೃಹತ್ ಮುನ್ನಡೆಯನ್ನು ಸಾಧಿಸಿದೆ. ಪ್ರಸ್ತುತ, ಪ್ರವಾಸಿ ತಂಡ ಐದು ಪಂದ್ಯಗಳ ಸರಣಿಯಲ್ಲಿ ೧-೨ರ ಹಿನ್ನಡೆಯಲ್ಲಿದೆ.

><><><><><><><><><><

ಜಾರ್ಜಿಯಾದ ಬಟುಮಿಯಲ್ಲಿ ನಿನ್ನೆ ಸಂಜೆ ನಡೆದ ಫಿಡೆ ಮಹಿಳಾ ವಿಶ್ವಕಪ್-೨೦೨೫ ಫೈನಲ್‌ನ ಭಾರತದ ಕೊನೆರೊ ಹಂಪಿ ಮತ್ತು ದಿವ್ಯಾ ದೇಶಮುಖ್ ನಡುವಿನ ಮೊದಲ ಸುತ್ತಿನ ಪಂದ್ಯ, ಡ್ರಾನಲ್ಲಿ ಅಂತ್ಯಗೊಂಡಿದೆ. ಇಂದು ೨ನೇ ಸುತ್ತಿನ ಪಂದ್ಯ ನಡೆಯಲಿದ್ದು, ಈ ಪಂದ್ಯವೂ ಡ್ರಾನಲ್ಲಿ ಅಂತ್ಯಗೊಂಡರೆ ನಾಳೆ ಟೈ ಬ್ರೇಕರ್ ಪಂದ್ಯ ನಡೆಯಲಿದೆ. ಫೈನಲ್ ಪಂದ್ಯದಲ್ಲಿ ಗೆಲುವು ಸಾಧಿಸುವವರಿಗೆ ಮುಂದಿನ ವರ್ಷ ನಡೆಯುವ ಫಿಡೆ ಮಹಿಳಾ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಸ್ಪರ್ಧಿಸಲು ಅವಕಾಶ ದೊರೆಯಲಿದೆ.

><><><><><><><><><><